

# ಮದುವೆಗಾಗಿ ರಶ್ಮಿಕಾ ರಜಾ

ಹೀಗೊಂದು ತಾತ್ಕಾಲಿಕ ಶೀರ್ಷಿಕೆಯ ಸಿನಿಮಾ ಚಿತ್ರೀಕರಣ ಶುರುವಾಗಿದ್ದು, ನಡುವೆ ರಶ್ಮಿಕಾ ಮಂದಣ್ಣ ರಜಾ ಕೇಳಿದ್ದಾರೆ. ಉದಯಪುರದಲ್ಲಿ ಫೆಬ್ರುವರಿ 26ರಂದು ನಟ ವಿಜಯ ದೇವರಕೊಂಡ ಅವರೊಟ್ಟಿಗೆ ವಿವಾಹ ಆಗಲಿರುವುದೇ ರಶ್ಮಿಕಾ ರಜಾ ಕೇಳಲು ಕಾರಣ ಎನ್ನಲಾಗುತ್ತಿದೆ. ಅಲ್ಲು ಅರ್ಜುನ್ ನಾಯಕರಾಗಿರುವ 'AA22xA6' ಚಿತ್ರವನ್ನು ಅಟ್ಲಿ ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಒಳಾಂಗಣ ಭಾಗಗಳ ಚಿತ್ರೀಕರಣ ಪ್ರಾರಂಭವಾಗಿದೆ. ಮುಂಬೈನ ಕೆಲವು ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಿರುವ ಸುದ್ದಿ ಇದೆ. ಚಿತ್ರದ ಶೀರ್ಷಿಕೆ ಇನ್ನೂ ಅಂತಿಮವಾಗಿದೆ ಇರುವುದರಿಂದ, ಸದ್ಯಕ್ಕೆ 'AA22xA6' ಎಂದು ಕರೆಯಲಾಗುತ್ತಿದೆ. 'ಗರ್ಲ್ ಫ್ರೆಂಡ್' ತೆಲುಗು ಚಿತ್ರದ ನಂತರ ರಶ್ಮಿಕಾ ಪಾತ್ರ ಪ್ರಯೋಗಕ್ಕೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಅಟ್ಲಿ ನಿರ್ದೇಶನದ ಸಿನಿಮಾದಲ್ಲಿಯೂ ಕನ್ನಡದ ಈ ನಟಿಗೆ ಆಸಕ್ತಿಕರ ಪಾತ್ರ ಇದೆಯಂತೆ. ಈ ಚಿತ್ರದಲ್ಲಿ ಅವರು ನೆಗೆಟಿವ್ ಪಾತ್ರದಲ್ಲಿ ಅಭಿನಯಿಸುತ್ತಿದ್ದು, ಕೆಲವು ಸಾಹಸ ದೃಶ್ಯಗಳಲ್ಲೂ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿ ಇದೆ.

ದಕ್ಷಿಣ ಭಾರತದ ಚಿತ್ರಗಳಲ್ಲಿ ಪುಂಖಾನುಪುಂಖವಾಗಿ ಅವಕಾಶ ಪಡೆದಿದ್ದ ನಟಿ ಶ್ರೀಲೀಲಾ ಅವರ ಬೇಡಿಕೆ ಈಗ ತುಸು ಕಡಿಮೆಯಾಗಿದ್ದು, ರಶ್ಮಿಕಾ ಗ್ರಾಫ್ ಏರುತ್ತಲೇ ಇದೆ. ಶ್ರೀಲೀಲಾ ಕೂಡ ಕನ್ನಡ ನೆಲದ ಹುಡುಗಿ. ವಿಜಯ್ ದೇವರಕೊಂಡ ಕೈಲಿ ಕೆಲವು ಸಿನಿಮಾಗಳು ಇದ್ದರೂ ಅವರಿಗೆ ಯಶಸ್ಸೊಂದರ ಅಗತ್ಯವಿದೆ. ಪೂರಿ ಜಗನ್ನಾಥ್ ನಿರ್ದೇಶನದ 'ಲೈಗರ್', ಗೌತಮ್ ತಿನ್ನನೂರಿ ನಿರ್ದೇಶನದ 'ಕಿಂಗ್ಡಂ' ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಸೋಲುಂಡವು. 'ರೌಡಿ ಜನಾರ್ದನ' ಎಂಬ ಚಿತ್ರಕ್ಕೆ ಅವರು ಸಹಿ ಹಾಕಿದ್ದಾರೆ.

ಉದಯಪುರದಲ್ಲಿ ಮದುವೆ ಸಮಾರಂಭ. ಹೈದರಾಬಾದ್‌ನಲ್ಲಿ ಆರತಕ್ಷತೆ ನಡೆಯಲಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಸುದ್ದಿ ಹರಿದಾಡುತ್ತಿದೆ. ಆದರೆ, ಇಬ್ಬರೂ ಅಧಿಕೃತವಾಗಿ ತಮ್ಮ ಮದುವೆಯ ವಿವರಗಳನ್ನು ಇನ್ನಷ್ಟೇ ನೀಡಬೇಕಿದೆ. ಮದುವೆಗಾಗಿ ಚಿತ್ರೀಕರಣದ ದಿನಾಂಕಗಳನ್ನು ಮಾರ್ಪಾಟು ಮಾಡಿಕೊಂಡಿರುವ ರಶ್ಮಿಕಾ, ಕೆಲವು ದಿನಗಳ ನಂತರ ಮತ್ತೆ ಸೆಟ್‌ಗೆ ಮರಳಲಿದ್ದಾರೆ.

# ಜಾಹ್ನವಿಗೆ ಬ್ರೇಕ್ ನೀಡೀತೆ 'ಪೆದ್ದಿ?'

ಬುಚ್ಚಿ ಬಾಬು ಸನಾ ನಿರ್ದೇಶನದ 'ಪೆದ್ದಿ' ತೆಲುಗು ಸಿನಿಮಾ ಬಗ್ಗೆ ಹಿಂದಿ ಚಿತ್ರರಂಗದಲ್ಲೂ ಕುತೂಹಲವಿದೆ. ಸಹಜವಾಗಿಯೇ ಹಿಂದಿ ಆವೃತ್ತಿಯೂ ತೆರೆಕಾಣಲಿದೆ. ಈ ಚಿತ್ರದ ನಾಯಕಿ ಜಾಹ್ನವಿ ಕಪೂರ್ ಆಗಿರುವುದರಿಂದ ಎರಡೂ ಚಿತ್ರರಂಗಗಳಲ್ಲಿ ಒಂದಿಷ್ಟು ಅನುಕೂಲಕರ ವಹಿವಾಟು ನಡೆಯಲಿದೆ ಎಂಬ ನಿರೀಕ್ಷೆ ನಿರ್ದೇಶಕ ಬುಚ್ಚಿ ಬಾಬು ಸನಾ ಅವರದ್ದು.

ಚಿತ್ರದ ಸಿನಿಮಾಟೋಗ್ರಾಫರ್ ರತ್ನವೇಲು ಕನ್ನಡದ 'ಗಾಳಿಪಟ' ಸಿನಿಮಾದ ದೃಶ್ಯಗಳಿಗೆ ಜೀವಂತಿಕೆ ತುಂಬಿದ್ದವರು. ಅವರು ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲೂ ತಮ್ಮ ಕ್ಷೇತ್ರದ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲು ಬಂದಿದ್ದರು. ತಾಂತ್ರಿಕವಾಗಿ ಸದಾ ಅಪ್‌ಗ್ರೇಡ್ ಆಗುತ್ತಿರುವ ಅವರಿಗೆ 'ಪೆದ್ದಿ' ಚಿತ್ರದ ವಸ್ತುವಿಷಯದ ಮೇಲೆ ನಂಬಿಕೆ ಇದೆ.

ರಾಮ್ ಚರಣ್ ಜೊತೆ ಇದೇ ಮೊದಲ ಬಾರಿಗೆ ಜಾಹ್ನವಿ ತೆರೆ ಹಂಚಿಕೊಳ್ಳುತ್ತಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಹೆಚ್ಚಿನ ಫಾಲೋವರ್‌ಗಳನ್ನು ಉಳ್ಳ ಜಾಹ್ನವಿ, ಸಿನಿಮಾ ಆಯ್ಕೆಗಳಲ್ಲಿಯೂ ಹೊಸತನದತ್ತ ಮುಖ ಮಾಡಿದವರು. 'ಲವಲವಿಕೆಯಿಂದ ಕಾಣುವ ಹೆಣ್ಣುಮಗಳ ಪಾತ್ರವನ್ನು ಬರೆದಿದ್ದೆ. ಅದಕ್ಕೆ ಜಾಹ್ನವಿ ಸೂಕ್ತ ಎಂದು ನನಗೆ ಅನಿಸಿತು. ಹಾಗಾಗಿ ಅವರನ್ನು ಈ ಪಾತ್ರಕ್ಕೆ ಆಯ್ಕೆ ಮಾಡಿದೆ. ಅವರು ಪ್ರತಿಭಾವಂತೆ. ಭಾಷೆಯ ವಿಷಯದಲ್ಲಿಯೂ ಮಡಿವಂತಿಕೆ ತೋರದೆ ಅಭಿನಯಿಸುತ್ತಾರೆ. ಆಕೆಗೆ ಒಳ್ಳೆಯ ಭವಿಷ್ಯವಿದೆ' ಎಂದು ಬುಚ್ಚಿ ಬಾಬು ಹೊಗಳಿದ್ದಾರೆ.

'ಪೆದ್ದಿ' ಚಿತ್ರವನ್ನು ಏಪ್ರಿಲ್ 30ರಂದು ತೆರೆಕಾಣಿಸಲು ಈಗ ನಿರ್ಧರಿಸಲಾಗಿದೆ. ಕ್ರೀಡಾಪಟುವಿನ ಬದುಕಿನ ಕಥನ ಇರುವ ಈ ಚಿತ್ರಕ್ಕೆ ಎ.ಆರ್. ರೆಹಮಾನ್ ಸಂಗೀತ ಇರುವುದು ಇನ್ನೊಂದು ವಿಶೇಷ.

